ದಯವಿಟ್ಟು ಬಾ! ದರ್ಶನ ನೀಡು! ನೀನು ಏಕೆ ಬರುತ್ತಿಲ್ಲ ಹೇಳು?" ಆ ಚಿಕ್ಕ ಹುಡುಗಿಯ ಹೃದಯವಿದ್ರಾವಕ ಕರೆಯನ್ನು ಕೇಳಿದ ಭಗವಂತ ದರ್ಶನ ಕೊಡದೆ ಇರಲಾಗಲಿಲ್ಲ. ಆಕೆಗೆ ದರ್ಶನವಿತ್ತ.

ಶ್ರೀರಾಮಕೃಷ್ಣರು ಈ ಸಂದರ್ಭದಲ್ಲಿ ಇನ್ನೊಂದು ಕಥೆಯನ್ನು ಹೇಳುತ್ತಾರೆ: "ಜಟಿಲನೆಂಬ ಹೆಸರಿನ ಬಾಲಕನ ಕಥೆ ಇದೆ, ಕೇಳು. ಆ ಬಾಲಕ ಒಂದು ಕಾಡಿನ ಮೂಲಕ ತನ್ನ ಶಾಲೆಗೆ ಹೋಗಬೇಕಾಗಿತ್ತು. ಕಾಡಿನ ದಾರಿಯಲ್ಲಿ ಬಹಳ ಭಯವಾಗುತ್ತಿತ್ತು. ಅದನ್ನು ತನ್ನ ತಾಯಿಗೆ ತಿಳಿಸಿದ. ಆಕೆ ಹೇಳಿದಳು, 'ನೀನೇಕೆ ಭಯಪಡಬೇಕು? ಮಧುಸೂದನನನ್ನು ಕರೆ.' ಆ ಬಾಲಕ ಕೇಳಿದ, 'ಅಮ್ಮ, ಮಧುಸೂದನ ಯಾರು?' ತಾಯಿ ಹೇಳಿದಳು, 'ಆತ ನಿನ್ನ ಅಣ್ಣ.' ಈ ಮಾತುಕತೆಯ ಬಳಿಕ ಒಂದು ದಿನ ಕಾಡಿನಲ್ಲಿ ಹೋಗುತ್ತಿದ್ದಾಗ, ಅವನಿಗೆ ಹೆದರಿಕೆಯಾಯಿತು. ಆಗ ಆ ಬಾಲಕ ಕೂಗಲಾರಂಭಿಸಿದ, 'ಅಣ್ಣಾ, ಮಧುಸೂದನ!' ಎಲ್ಲಿ, ಮಧುಸೂದನನೂ ಇಲ್ಲ, ಅಣ್ಣನೂ ಇಲ್ಲ. ಆಗ ಬಾಲಕ ಅಳುತ್ತಾ ತಾರಕಸ್ವರದಲ್ಲಿ ಕೂಗಲಾರಂಭಿಸಿದ, 'ಎಲ್ಲಿದ್ದೀಯೋ ಅಣ್ಣಾ, ಮಧುಸೂದನ, ಬೇಗ ಬಾರೋ, ನನಗೆ ಬಹಳ ಹೆದರಿಕೆಯಾಗುತ್ತಿದೆ.' ಆಗ ಭಗವಂತನಿಗೆ ಸುಮ್ಮನಿರಲಾಗಲಿಲ್ಲ. ಆತ ಪ್ರತ್ಯಕ್ಷನಾಗಿ ಬಾಲಕನಿಗೆ ಹೇಳಿದ, 'ನೋಡೋ, ನಾನಿಲ್ಲಿಯೇ ಇದ್ದೇನೆ, ನೀನೇಕೆ ಭಯಪಡುತ್ತೀಯೆ.' ಹೀಗೆಂದು ಹೇಳಿ ಆ ಬಾಲಕನನ್ನು ಶಾಲೆಯ ದಾರಿ ಮುಟ್ಟಿಸಿ ಹೇಳಿದ, 'ನೀನು ಕರೆದಾಗಲೆಲ್ಲ ನಾನು ಬಂದುಬಿಡುತ್ತೇನೆ, ಹೆದರಿಕೊಳ್ಳಬೇಡ.' " ಬಾಲಕನಿಗಿದ್ದ ಇಂತಹ ವಿಶ್ವಾಸ, ವ್ಯಾಕುಲತೆ ಸಾಧಕನಿಗೂ ಇರಬೇಕು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

ಇನ್ನೊಂದು ಕಥೆ ಇದೆ: ಒಬ್ಬ ಬ್ರಾಹ್ಮಣ ಏನೋ ಕೆಲಸದ ನಿಮಿತ್ತ ತುರ್ತಾಗಿ ಬೇರೆ ಸ್ಥಳಕ್ಕೆ ಹೋಗಬೇಕಾಗಿ ಬಂತು. ಆತ ತನ್ನ ಪುಟ್ಟ ಮಗನಿಗೆ ಹೇಳಿದ, "ನೀನಿಂದು ದೇವರಿಗೆ ನೈವೇದ್ಯ ಅರ್ಪಿಸಿ, ಊಟ ಮಾಡಿಸು." ಅದರಂತೆ ಈ ಹುಡುಗ ಎಲ್ಲವನ್ನೂ ದೇವರ ಮುಂದಿಟ್ಟು ನಿವೇದಿಸಿ ಕುಳಿತ. ಬಹಳ ಹೊತ್ತಿನವರೆಗೆ ನೋಡಿದ. ದೇವರು ಬರುತ್ತಲೂ ಇಲ್ಲ, ಊಟವನ್ನೂ ಮಾಡುತ್ತಿಲ್ಲ. ಈ ಹುಡುಗ ಬಹಳ ಹೊತ್ತು ಕುಳಿತು ನೋಡಿದ. ಆತ ಸಂಪೂರ್ಣವಾಗಿ ನಂಬಿದ್ದ, ದೇವರು ಬಂದು ಪೀಠದ ಮೇಲೆ ಕುಳಿತು ಎಲ್ಲವನ್ನೂ ಸ್ವೀಕರಿಸುತ್ತಾನೆಂದು. ಬಹಳ ಹೊತ್ತಾಯಿತು.

ಆಗ ಈ ಹುಡುಗ ಮೊರೆಯಿಡಲಾರಂಭಿಸಿದ, "ಹೇ ದೇವರೆ, ಆಸನದಲ್ಲಿ ಬಂದು ಕುಳಿತುಕೊಂಡು ಊಟಮಾಡು, ಈಗಲೇ ಬಹಳ ಹೊತ್ತಾಗಿಬಿಟ್ಟಿದೆ, ನನ್ನ ಕೈಯ್ಯಲ್ಲಿ ಇನ್ನು ಕಾದು ಕುಳಿತಿರಲಾಗುವುದಿಲ್ಲ." ಹೀಗೆ ಮೊರೆಯಿಟ್ಟರೂ ದೇವರು ಒಂದು ಮಾತನ್ನೂ ಆಡಲಿಲ್ಲ. ಹುಡುಗ ರೋದಿಸುತ್ತ ಮತ್ತೆ ಮೊರೆಯಿಟ್ಟ, "ದೇವರೆ, ನನ್ನ ತಂದೆ ನಿನಗೆ ಊಟ ಮಾಡಿಸುವಂತೆ ಹೇಳಿ ಹೋಗಿದ್ದಾರೆ. ಏತಕ್ಕೆ ನೀನು ಬರುತ್ತಿಲ್ಲ? ನನ್ನ ಕೈಯಿಂದ ಏಕೆ ಊಟಮಾಡಲಿಚ್ಛಿಸುವುದಿಲ್ಲ?" ಆ ಹುಡುಗ ಈ ರೀತಿಯಾಗಿ ಅತ್ಯಂತ ವ್ಯಾಕುಲನಾಗಿ ಅಳಲಾರಂಭಿಸಿದ.

ಸ್ವಲ್ಪ ಹೊತ್ತಿನಲ್ಲೇ ದೇವರು ಪೀಠದಿಂದ ನಗುನಗುತ್ತ ಎದ್ದು ಬಂದು, ಆಸನದಲ್ಲಿ ಕುಳಿತು ಆನಂದದಿಂದ ಎಲ್ಲವನ್ನೂ ಸ್ವೀಕರಿಸಿದ. ಆ ಹುಡುಗ ದೇವರಿಗೆ ನೈವೇದ್ಯ ಅರ್ಪಿಸಿ ದೇವರಕೋಣೆಯ ಬಾಗಿಲನ್ನು ತೆಗೆದುಕೊಂಡು ಹೊರಬಂದಾಗ, ಮನೆಯವರು ಕೇಳಿದರು, "ದೇವರಿಗೆ ನೈವೇದ್ಯವಾಯಿತೆ? ಹಾಗಾದರೆ ಎಲ್ಲವನ್ನೂ ತೆಗೆದುಕೊಂಡು ಬಂದುಬಿಡು." ಆ ಬಾಲಕ ಹೇಳಿದ, "ಹೂಂ, ನೈವೇದ್ಯವಾಯಿತು, ದೇವರು ಎಲ್ಲವನ್ನೂ ಊಟಮಾಡಿಬಿಟ್ಟ." ಅವರೆಲ್ಲ ಕೇಳಿದರು, "ಅದು ಹೇಗೊ?" ಆಗ ಆ ಹುಡುಗ ಸರಳಬುದ್ಧಿಯಿಂದ ಹೇಳಿದ, "ಏಕೆ, ದೇವರು ಊಟ ಮಾಡಿಬಿಟ್ಟ." ಬಳಿಕ ಎಲ್ಲರೂ ದೇವರ ಮನೆಗೆ ಹೋಗಿ ನೋಡಿ ಆಶ್ಚರ್ಯಪಡಲಾರಂಭಿಸಿದರು.

ಯಾರು ಭಗವಂತನಿಗಾಗಿ ನಿಜವಾಗಿ ವ್ಯಾಕುಲರಾಗಿದ್ದಾರೊ, ಅವರಿಗೆ ಅವನ ದರ್ಶನ ಮತ್ತು ಸ್ಮರಣೆಯು ನಿಂತುಹೋದಲ್ಲಿ ನೀರಿನಿಂದ ತೆಗೆದ ಮೀನಿನಂತೆ ಚಡಪಡಿಸುತ್ತಾರೆ. ಅವರಿಗೆ ಪ್ರಾಪಂಚಿಕ ವಸ್ತುಗಳಿಂದ ಯಾವ ಸಮಾಧಾನವೂ ದೊರೆಯುವುದಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಮಗುವಿಗೆ ಯಾವುದೇ ಆಟಿಕೆ ನೀಡಿದರೂ, ಎಷ್ಟು ಸಮಾಧಾನ ಮಾಡಿದರೂ, ಅಮ್ಮನೇ ಬೇಕೆಂದು ಯಾವಾಗ ರಚ್ಚೆ ಹಿಡಿಯುವುದೊ, ಆಗ ಅವಳು ಹೆಚ್ಚು ಹೊತ್ತು ಇರಲಾರಳು. ಒಲೆಯ ಮೇಲಿನ ಅನ್ನದ ತಪ್ಪಲೆಯನ್ನು ಕೆಳಗಿಳಿಸಿ ಓಡಿ ಬಂದು ಮಗುವನ್ನು ಎತ್ತಿಕೊಳ್ಳುವಳು."

ಶ್ರೀರಾಮಕೃಷ್ಣರು ಭಕ್ತರಿಗೆ ಒಂದು ಮಹತ್ತರವಾದ ಆಶ್ವಾಸನೆಯನ್ನು ನೀಡಿದ್ದಾರೆ, "ನಾನು ನಿಜವಾಗಿ ನಿಮಗೆ ಹೇಳುತ್ತೇನೆ, ಕೇಳಿ: ಯಾರಿಗೆ ದೇವರು ಬೇಕೊ, ಅವರಿಗೆ ಅವನು ಸಿಕ್ಕುತ್ತಾನೆ. ನಿಜವಾದ ಉತ್ಸಾಹದಿಂದ ಮೂರು ದಿನ ಪ್ರಯತ್ನಪಡಿ. ಯಾರು ಅವನಿಗಾಗಿ ಕಾತರರಾಗಿದ್ದಾರೊ, ಅವರು ಅವನನ್ನು ಪಡೆಯುತ್ತಾರೆ. ನೀವು ಖಂಡಿತವಾಗಿಯೂ ಮುಂದುವರಿಯುವಿರಿ." ಇಂತಹ ಆಶ್ವಾಸನೆಯನ್ನು ಅವತಾರಪುರುಷರಾದ, ಯುಗಪುರುಷರಾದ ಶ್ರೀರಾಮಕೃಷ್ಣರು ನಮಗೆಲ್ಲ ನಿಶ್ಚಯವಾಗಿ ನೀಡುತ್ತಿದ್ದಾರೆ. ಶ್ರೀರಾಮಕೃಷ್ಣರು ನಡೆದು, ನುಡಿದು ತೋರಿದ ಭಗವದ್ವ್ಯಾಕುಲತೆಯ ಮಾರ್ಗವನ್ನು ಎಲ್ಲ ಸಾಧಕರೂ ಸ್ವಲ್ಪವಾದರೂ ಪಾಲಿಸಿದಲ್ಲಿ, ಅನುಸರಿಸಿದಲ್ಲಿ, ಅಂಥವರಿಗೆ ಭಗವಂತನ ಲಾಭವಾಗುವುದರಲ್ಲಿ ಸಂಶಯವೇ ಇಲ್ಲ.

# ಶ್ರೀರಾಮಕೃಷ್ಣರು ಮತ್ತು ಭಕ್ತಿಯೋಗ

ಸ್ವಾಮಿ ತ್ರಿಲೋಕಾತ್ಮಾನಂದ

**ಭಕ್ತಿಯ ಆವಶ್ಯಕತೆ :** ಜೀವನದ ಪರಮಪುರುಷಾರ್ಥವಾಗಿರುವ ಮೋಕ್ಷವನ್ನು ಪಡೆಯಲು ಭಕ್ತಿಯೇ ಅತ್ಯುತ್ತಮವಾದ ಹಾಗೂ ಸುಲಭವಾದ ಮಾರ್ಗ. ಭಗವದ್ಭಕ್ತಿಯು ಪ್ರೀತಿ ಹಾಗೂ ಅನುರಾಗಗಳಿಂದ ಸಮ್ಮಿಲಿತಗೊಂಡಿರುತ್ತದೆ. ಪ್ರಾಪಂಚಿಕ ಪ್ರೀತಿಯು ಸಾಮಾನ್ಯ ವಿಷಯವಸ್ತುಗಳನ್ನು, ಬಂಧುಮಿತ್ರರನ್ನು ಕುರಿತದ್ದು. ಭಗವಂತನ ಮೇಲಿನ ಭಕ್ತಿಯಾದರೋ ಜಗತ್ತಿನ ನಿಯಾಮಕನೂ, ಜಗತ್ಕರ್ತೃವೂ ಹಾಗೂ ಜಗತ್ತಿನ ಪರಮಾಧಾರನೂ ಆದ ಈಶ್ವರನನ್ನು ಕುರಿತದ್ದಾಗಿರುತ್ತದೆ.

'ನಾರದೀಯ ಭಕ್ತಿ'ಯೇ ಇಂದಿನ ಕಾಲಕ್ಕೆ ಸೂಕ್ತವಾದ ಸಾಧನಾಮಾರ್ಗ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅವರು ಉಪದೇಶಿಸಿರುವ ಭಕ್ತಿಸಾಧನೆಯನ್ನು ಹಂತಹಂತವಾಗಿ ವಿಶ್ಲೇಷಿಸಿ, ಸರಳವಾಗಿ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ನಾವು ಒಬ್ಬರ ವಿಷಯವನ್ನು ಅರಿತಂತೆಲ್ಲಾ, ಅವರು ಉತ್ತಮ ವ್ಯಕ್ತಿಗಳಾಗಿದ್ದ ಪಕ್ಷದಲ್ಲಿ, ನಮಗೆ ಅವರ ಮೇಲಿನ ಪ್ರೀತಿಯು ಹೆಚ್ಚಾಗುತ್ತಾ ಹೋಗುತ್ತದೆ. ಹಾಗೆಯೇ ಭಗವಂತನ ಮಹಿಮೆಯ ಬಗ್ಗೆ ಹೆಚ್ಚುಹೆಚ್ಚಾಗಿ ತಿಳಿದಂತೆಲ್ಲಾ, ಆತನ ಬಗೆಗಿನ ಪ್ರೀತಿಯು ಸಹ ನಮ್ಮಲ್ಲಿ ಹೆಚ್ಚಾಗುತ್ತದೆ. ಹಾಗೆಂದೇ ಮೋಕ್ಷಕ್ಕಾಗಿ ಸಾಧನೆಯನ್ನು ಮಾಡುತ್ತಿರುವಾಗ ಮೊದಲು ಗೌಣಿಭಕ್ತಿಯನ್ನು ಅಭ್ಯಾಸ ಮಾಡಬೇಕು. ಇದರಿಂದ ಹುಟ್ಟಿದ ಜ್ಞಾನವು ಅಜ್ಞಾನವನ್ನು ನಾಶಪಡಿಸುತ್ತದೆ. ಆಗ ನಮ್ಮ ಅಂತರ್ಯದಲ್ಲಿ ಪರಾಭಕ್ತಿಯು ಜನಿಸಿ ಮೋಕ್ಷವನ್ನು ತಂದುಕೊಡುತ್ತದೆ. ಈ ಮೋಕ್ಷವು ಕೊನೆಯಿಲ್ಲದ್ದು, ಶಾಶ್ವತವಾದದ್ದು. ಈಗ ಭಗವಾನ್ ಶ್ರೀರಾಮಕೃಷ್ಣರು ಆಧುನಿಕ ಯುಗಕ್ಕೆ ತೋರಿಸಿಕೊಟ್ಟಿರುವ ಭಕ್ತಿಯೋಗದ ಬಗ್ಗೆ ತಿಳಿದುಕೊಳ್ಳೋಣ.

**ಭಕ್ತಿಮಾರ್ಗ ಮತ್ತು ಅದರ ಬೆಳವಣಿಗೆ:** ಫೋಟೋ ತೆಗೆಯುವಾಗ, ರಾಸಾಯನಿಕ ದ್ರವ್ಯಗಳನ್ನು ಲೇಪಿಸಿದ ಗಾಜನ್ನು ಉಪಯೋಗಿಸುತ್ತಾರೆ. ಸರಿಯಾದ ರಾಸಾಯನಿಕ ದ್ರವ್ಯಗಳನ್ನು ಲೇಪಿಸದ ಬರಿಯ ಗಾಜಿನ ಮೇಲೆ ಯಾವ ಪ್ರತಿಬಿಂಬವೂ ಮೂಡುವುದಿಲ್ಲ. ಅದೇ ರೀತಿಯಾಗಿ ಭಕ್ತಿಯೆನ್ನುವ ರಾಸಾಯನಿಕ ದ್ರವ್ಯವನ್ನು ಲೇಪಿಸದ ಮನುಷ್ಯನ ಹೃದಯದಲ್ಲಿ ದೇವರ ಪ್ರತಿಬಿಂಬವನ್ನು ಹಿಡಿದಿಡಲಾಗುವುದಿಲ್ಲ. ಪತಿವ್ರತಾ ಸ್ತ್ರೀಗೆ ತನ್ನ ಪತಿಯ ಮೇಲಿರುವ ಆಕರ್ಷಣೆಯ ಹಾಗೆ, ಭಗವಂತನ ಮೇಲೆ ಆಕರ್ಷಣೆ ಇದ್ದರೆ ಮಾತ್ರ ಭಕ್ತಿಯ ಬೆಳವಣಿಗೆಯಾಗುವುದು. ನಮ್ಮ ಇಂದ್ರಿಯ ಮನಸ್ಸುಗಳು ಭಗವಂತನಲ್ಲಿ ಮಿಲನಗೊಳ್ಳಬೇಕು. ಆಗ ಮಾತ್ರ 'ಭಾವ' ಉತ್ಪತ್ತಿಯಾಗುತ್ತದೆ.



ಪ್ರಾಪಂಚಿಕ ವಿಷಯಭೋಗಗಳಲ್ಲಿ ಭೋಗಾಸಕ್ತಿ ಕಡಿಮೆಯಾದಷ್ಟೂ, ಭಗವಂತನಲ್ಲಿ ಭಕ್ತಿ ಹೆಚ್ಚುವುದು. ಲೌಕಿಕ ಜಗತ್ತಿನಲ್ಲಿ ಮಲಿನವಾಗದ ಮನಸ್ಸಿಗೆ ಮಾತ್ರವೇ ದೇವರನ್ನು ಪ್ರೀತಿಸುವ ಚಿತ್ತೈಕಾಗ್ರತೆ ಬರುವುದು. ಯಾವ ರೀತಿ ತರಬೇತಿಯಿಲ್ಲದ ಕುದುರೆಯು ಒಂದು ಹೆಜ್ಜೆ ಕೂಡ ಮುಂದೆ ಹೋಗುವುದಿಲ್ಲವೋ, ಹಾಗೆಯೇ ಮನಸ್ಸನ್ನು ನಿಗ್ರಹಿಸದೆ ಭಗವಂತನನ್ನು ಕಾಣಲು ಸಾಧ್ಯವಿಲ್ಲ. ಭಗವಂತನನ್ನು ನಮ್ಮವನೆಂದು ತಿಳಿದು ಅವನನ್ನು ಪಡೆದುಕೊಳ್ಳಬೇಕು. ಒಂದು ಭಾವವನ್ನು ನಿಷ್ಠೆಯಿಂದ ಅನುಸರಿಸಿ ಭಗವಂತನನ್ನು ನಮ್ಮವನನ್ನಾಗಿ ಮಾಡಿಕೊಳ್ಳಬೇಕು. ಹೊಸದಾಗಿ ಪರಿಚಯವಾದ ಇಬ್ಬರು ತಾವು ಮಾತನಾಡುವಾಗ, ಶಿಷ್ಟಾಚಾರದ ನಿಯಮಗಳನ್ನು ಅನುಸರಿಸುವರು. ಆದರೆ ಆತ್ಮೀಯತೆ ಹೆಚ್ಚಿದಂತೆ, ತೋರಿಕೆಯ ಗೌರವ ಹೋಗಿ, ಬಹಳ ಸಲಿಗೆಯಿಂದ ಮಾತನಾಡುತ್ತಾರೆ. ಹಾಗೆಯೇ ನಾವು ಕೂಡ ದೇವರಲ್ಲಿ ಸಾಮೀಪ್ಯವನ್ನು ನಿಧಾನವಾಗಿ ಗಳಿಸಿಕೊಳ್ಳಬೇಕು.

**ಭಕ್ತಿ ಮತ್ತು ಪ್ರಾಪಂಚಿಕ ಪ್ರೀತಿ :** ಒಮ್ಮೆ ಮುದುಕಿಯೊಬ್ಬಳಿಗೆ, ಮನೆಯನ್ನು ತೊರೆದು, ಬೃಂದಾವನದಲ್ಲಿ ತನ್ನ ಅಂತಿಮ ದಿನಗಳನ್ನು ಕಳೆಯಬೇಕೆಂಬ ಇಚ್ಛೆಯಾಯಿತು. ಈ ವಿಷಯವನ್ನು ಆಕೆ ಶ್ರೀರಾಮಕೃಷ್ಣರಿಗೆ ನಿವೇದಿಸಿಕೊಂಡಳು. ಶ್ರೀರಾಮಕೃಷ್ಣರು ಆ

ಮುದುಕಿಯ ಅಂತರಾಳವನ್ನು ತಿಳಿದು ಹೀಗೆಂದರು: "ನಿನಗೆ ನಿನ್ನ ಮೊಮ್ಮಗಳ ಮೇಲೆ ತುಂಬ ಪ್ರೀತಿ ಇದೆ. ನೀನು ಬೃಂದಾವನಕ್ಕೆ ಹೋದರೂ ನಿನ್ನ ಮನಸ್ಸು ನಿನ್ನ ಮೊಮ್ಮಗಳ ಮೇಲೆಯೇ ಇರುತ್ತದೆ. ಆದ್ದರಿಂದ ನಿನ್ನ ಮೊಮ್ಮಗಳಲ್ಲಿಯೇ ಪ್ರೀತಿಯಿಂದ ರಾಧೆಯನ್ನು ಕಂಡರೆ, ಬೃಂದಾವನದಲ್ಲಿರುವ ಪುಣ್ಯವೆಲ್ಲಾ ಇಲ್ಲಿಯೇ ಬರುವುದು." ಈ ವಿಷಯವಾಗಿ ಶ್ರೀರಾಮಕೃಷ್ಣರು ಒಬ್ಬ ಭಕ್ತನನ್ನು ಉದ್ದೇಶಿಸಿ ಹೀಗೆ ಹೇಳುತ್ತಾರೆ: "ಒಬ್ಬನು ತಾನು ಪ್ರೀತಿಸುವ ವಸ್ತುವನ್ನೇ ಇಷ್ಟದೇವತೆ ಎಂದು ತಿಳಿದರೆ ಮನಸ್ಸು ಸುಲಭವಾಗಿ ದೇವರ ಕಡೆ ತಿರುಗುವುದು."

**ಭಕ್ತಿಯ ಪರಿಣಾಮ :** ತಾಯಿತಂದೆಯರಿಗೆ ಮಗುವನ್ನು ಕಳೆದುಕೊಂಡ ದಿನ ತಮ್ಮ ದೇಹಸುಖವನ್ನು ಕುರಿತು ಆಲೋಚಿಸಲೂ ಆಗುವುದಿಲ್ಲ. ಅದರಂತೆ, ಭಗವಂತನ ಮೇಲೆ ಪ್ರೇಮ ಹೆಚ್ಚಿದಂತೆ ಇಂದ್ರಿಯಸುಖಗಳು ಸಪ್ಪೆಯಾಗಿ ಕಾಣುತ್ತವೆ. ಭಕ್ತಿಯೋಗದಲ್ಲಿ ಇಂದ್ರಿಯನಿಗ್ರಹ ತನಗೆ ತಾನೇ ಒದಗಿ ಬರುವುದು. ಭಗವಂತನ ಹೆಸರನ್ನು ಕೇಳಿದ ತಕ್ಷಣವೇ ಯಾರ ಕಣ್ಣಿನಲ್ಲಿ ಪ್ರೇಮಾಶ್ರು ಬರುವುದೊ, ಅವನಿಗೆ ಯಾವ ಸಾಧನೆಯೂ ಬೇಕಾಗಿಲ್ಲ; ಆದರೆ ಆನಂದಬಾಷ್ಪ ಬರುವವರೆಗೆ ಸಾಧನೆ ಅತ್ಯವಶ್ಯಕ.

ಅಂತರ್ಯದಲ್ಲಿ ಭಕ್ತಿ ಜಾಗೃತವಾಯಿತೆಂದರೆ ಕಾಮಕ್ರೋಧಾದಿ ಅರಿಷಡ್ವರ್ಗಗಳೆಲ್ಲ ನಾಶವಾಗುವುವು. ಶ್ರೀಕೃಷ್ಣನ ಮೇಲಿನ ಅತಿನಿಕಟ ಪ್ರೇಮದಿಂದ ಗೋಪಿಯರು ಈ ಸ್ಥಿತಿಯನ್ನು ಪಡೆದುಕೊಂಡಿದ್ದರು. "ರಾಧೆಯು ತನ್ನ ಕಣ್ಣಿಗೆ ಪ್ರೇಮಾಂಜನವನ್ನು ಲೇಪಿಸಿಕೊಂಡಿರುವುದರಿಂದ ಎಲ್ಲಾ ಕಡೆಯಲ್ಲಿಯೂ ಕೃಷ್ಣನನ್ನೇ ನೋಡುತ್ತಿದ್ದಳು" ಎಂದು ಗೋಪಿಯರು ಹೇಳುತ್ತಿದ್ದರು.

ಪತಂಗವು ಬೆಳಕನ್ನು, ಇರುವೆಯು ಸಕ್ಕರೆಯ ಪಾಕವನ್ನು ಕಂಡರೆ, ಅದನ್ನು ಬಿಡದೆ ಅದರಲ್ಲಿಯೇ ತನ್ನ ಪ್ರಾಣವನ್ನು ಕಳೆದುಕೊಳ್ಳುವುವು. ಆದರೆ ನಿಜವಾದ ಭಕ್ತನನ್ನು ಆಕರ್ಷಿಸುವ ಭಗವಜ್ಜ್ಯೋತಿ ಅವನನ್ನು ಸುಟ್ಟುಹಾಕುವುದಿಲ್ಲ. ಇದು ವಜ್ರದ ಬೆಳಕಿನಂತೆ ಇದ್ದು, ಭಕ್ತನ ಹೃದಯಕ್ಕೆ ಶಾಂತಿ ಹಾಗೂ ಪರಮಾನಂದಗಳನ್ನು ಕೊಡುವುದು.

ಭಗವಂತನನ್ನು ಕಾಣಬೇಕೆಂಬ ತೀವ್ರವಾದ ವ್ಯಾಕುಲತೆ ಇದ್ದರೆ ಸಾಕು, ಅದು ಅವನನ್ನು ಭಗವಂತನ ಸಾನ್ನಿಧ್ಯಕ್ಕೆ ಕರೆದೊಯ್ಯುವುದು. ಇದು ದಾರಿ ಗೊತ್ತಿಲ್ಲದೆ ಊರನ್ನು ಸೇರಲು ಹೊರಟಂತೆ. ಅಂತಹವನು ದಾರಿಯಲ್ಲಿ ಅತಿ ಕಾತರನಾಗಿ ಸಿಕ್ಕಿದವರನ್ನೆಲ್ಲಾ ವಿಚಾರ ಮಾಡಿ, ಕೊನೆಗೆ ಊರನ್ನು ಸೇರಿ ಕೃತಾರ್ಥನಾಗುವನು. ಹಾಗೆಯೇ ಭಗವಂತನನ್ನು ಪಡೆಯುವ ಮಾರ್ಗದಲ್ಲಿ ಒಬ್ಬನು ಮೊದಲು ತಪ್ಪು ಮಾಡಬಹುದು, ಆದರೆ ಅಂತಿಮವಾಗಿ ಸರಿಯಾದ ಮಾರ್ಗವನ್ನೇ ಸೇರುವನು.

ವ್ಯಕ್ತಿಯ ಅಂತರ್ಯದಲ್ಲಿ ಭಕ್ತಿಯು ಬೆಳೆದಂತೆ ಕ್ರಮವಾಗಿ ಜ್ಞಾನ, ವಿವೇಕ, ವೈರಾಗ್ಯ, ಜೀವಿಗಳಲ್ಲಿ ದಯೆ ಮುಂತಾದ ಗುಣಗಳೆಲ್ಲಾ ಪ್ರತಿಬಿಂಬಿಸುವುವು. ಭಕ್ತಿ ಪಕ್ವವಾದಾಗ ಭಗವಂತನ ಸಾಕ್ಷಾತ್ಕಾರವಾಗುವುದು. ಜೀವಾತ್ಮನು ಪರಮಾತ್ಮನ ಕಡೆಗೆ ಆಕರ್ಷಿತನಾದರೆ ಕ್ರಮೇಣ ಅವನ ಸ್ವಾರ್ಥ ವ್ಯಕ್ತಿತ್ವ ನಾಶವಾಗಿ ಅವನು ಪರಂಧಾಮವನ್ನು ಸೇರುವನು.

**ಭಕ್ತಿಯ ವಿಧಾನಗಳು:** ಸಾಮಾನ್ಯವಾಗಿ ಪ್ರೇಮವನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. ಮೊದಲನೆಯದು **ಸಮರ್ಥ** (ನಿಃಸ್ವಾರ್ಥ) – ಇಲ್ಲಿ ಪ್ರೇಮಿಯು ಪ್ರೇಯಸಿಯ ಹಿತವನ್ನು ಮಾತ್ರ ಬಯಸುವನು. ಎರಡನೆಯದು **ಸಮಂಜಸ** (ಪರಸ್ಪರ) – ಇಲ್ಲಿ ಇಬ್ಬರ ಹಿತವೂ ಪ್ರೇಮಿಯ ಮನಸ್ಸಿನಲ್ಲಿರುವುದು. ಮೂರನೆಯದು **ಸಾಧಾರಣ** (ಸ್ವಾರ್ಥ) – ಇಲ್ಲಿ ಪ್ರೇಮಿಯು ತನ್ನ ಪ್ರೇಯಸಿಯ ಸುಖದುಃಖಗಳನ್ನು ಲೆಕ್ಕಿಸದೆ ತನ್ನ ಸ್ವಂತ ಸುಖವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವನು.

ಶ್ರೀರಾಮಕೃಷ್ಣರು ಮೂರು ರೀತಿಯ ಭಕ್ತಿಯ ಬಗ್ಗೆ ಹೇಳುತ್ತಾರೆ:

೧. **ಸಾತ್ವಿಕ ಭಕ್ತಿ :** ಈ ಸ್ಥಿತಿಯಲ್ಲಿ ಭಕ್ತನು ದೈನ್ಯತೆಯನ್ನು ತಾಳುವನು. ಗೋಪ್ಯವಾಗಿ ಏಕಾಂತದಲ್ಲಿ ಯಾರಿಗೂ ತಿಳಿಯದಂತೆ ಸೊಳ್ಳೆಪರದೆಯ ಒಳಗೆ ಧ್ಯಾನ ಮಾಡುವನು. ಆಹಾರ ಮತ್ತು ಬಟ್ಟೆಯಲ್ಲಿ ಸರಳತೆಯಿಂದ ಇರುವನು. ಆತನಲ್ಲಿ ಯಾವುದೇ ಬಾಹ್ಯಾಡಂಬರವಿರುವುದಿಲ್ಲ.

೨. **ರಾಜಸಿಕ ಭಕ್ತಿ :** ಇದು ತೋರಿಕೆಯ ಭಕ್ತಿ. ಇದರಲ್ಲಿ ಭಕ್ತನು ಬಾಹ್ಯನಿಯಮ ಮತ್ತು ಆಚಾರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾನೆ. ಉಪಾಸನೆ ಮಾಡುವಾಗ ಮಡಿಬಟ್ಟೆ ಧರಿಸುವುದು, ರೇಷ್ಮೆವಸ್ತ್ರವನ್ನು ಧರಿಸುವುದು, ಭಗವಂತನನ್ನು ವಿಶೇಷ ಅಲಂಕಾರಗಳಿಂದ ಪೂಜೆ ಮಾಡುವುದು – ಇವನ್ನು ಮಾಡುತ್ತಾನೆ.

೩. **ತಾಮಸಿಕ ಭಕ್ತಿ :** ಇದು ಮೃಗೀಯ ಭಕ್ತಿ. ತಾಮಸಿಕ ಭಕ್ತನಾದವನು ಬಹಳ ಕಠೋರವಾಗಿರುತ್ತಾನೆ. ಬಲಪ್ರಯೋಗ ಮಾಡಿ ದರೋಡೆಕೋರನು ವಸ್ತುಗಳನ್ನು ಅಪಹರಿಸುವಂತೆ, ಭಗವಂತನ ಮೇಲೆ ಬಲಪ್ರಯೋಗ ಮಾಡುತ್ತಾನೆ. "ಭಗವಂತನ ನಾಮವನ್ನು ಉಚ್ಚರಿಸಿದಾಗ, ಪಾಪದ ರಾಶಿಗೆ ಬೆಂಕಿ ಇಟ್ಟಂತೆ ಎಲ್ಲ ಪಾಪಗಳೂ ಬೂದಿಯಾಗುವುವು. ನಾನು ಭಗವಂತನ ಸಂಪತ್ತಿಗೆ ಹಕ್ಕುದಾರ" ಎಂದು ಅವನು ಹೇಳುವನು.

ಭಗವನ್ನಾಮವನ್ನು ಯಾವಾಗಲೂ ರಭಸದಿಂದ ಹೇಳುವುದು ಹಾಗೂ ಕೈಗಳನ್ನು ಎತ್ತಿ ಉನ್ಮತ್ತನಂತೆ ಕುಣಿಯುವುದು – ಆಧುನಿಕ ಯುಗದಲ್ಲಿ ಈ ರೀತಿಯ ಭಕ್ತಿ ಹೆಚ್ಚು ಉಪಯುಕ್ತವಾಗುತ್ತದೆ. ಧ್ಯಾನಕ್ಕಿಂತಲೂ ಅದು ಬಹು ಬೇಗನೆ ಫಲ ನೀಡುವುದು.

**ಭಕ್ತಿಸೋಪಾನ:** ಭಕ್ತಿಯ ವಿಕಸನವು ಈ ಮುಂದಿನ ಹಂತಗಳಲ್ಲಿ ಆಗುತ್ತದೆ: ೧. ಸಜ್ಜನರ ಸಂಗ ೨. ಧಾರ್ಮಿಕ ವಿಷಯಗಳಲ್ಲಿ ಶ್ರದ್ಧೆ ೩.ಇಷ್ಟದೇವತೆಯ ಮೇಲೆ ನಿಷ್ಠೆ ೪.ಭಕ್ತಿ ೫. ಭಾವ ಅಥವಾ ಭಗವಂತನ ಚಿಂತನೆಯಲ್ಲಿ ಮಗ್ನನಾಗಿರುವುದು ೬ .**ಮಹಾಭಾವ** : ಭಾವ ತೀವ್ರವಾದಾಗ ಭಕ್ತನು ಕೆಲವು ವೇಳೆ ಹುಚ್ಚನಂತೆ ನಗುತ್ತಾನೆ; ಕೆಲವು ವೇಳೆ ಅಳುತ್ತಾನೆ. ಇದು ಅಂತಹ ಸ್ಥಿತಿ. ಆಗ ಭಕ್ತನು ದೇಹಾಭಿಮಾನವನ್ನು ಸಂಪೂರ್ಣವಾಗಿ ಗೆದ್ದಿರುತ್ತಾನೆ. ಮಹಾಪುರುಷರು ಮತ್ತು ಅವತಾರಪುರುಷರಿಗೆ ಮಾತ್ರ ಇದು ಸಾಧ್ಯ. ೭. **ಪ್ರೇಮ** ಅಥವಾ ಭಗವಂತನ ಮೇಲೆ ಅತ್ಯಂತ ತೀವ್ರ ಭಕ್ತಿ; ಈ ಲೌಕಿಕ ಜಗತ್ತನ್ನು ಸಂಪೂರ್ಣವಾಗಿ ಮರೆಯುವುದು. ಇಂಥ ಸ್ಥಿತಿಯಲ್ಲಿ ಒಬ್ಬನು ತನ್ನನ್ನು ತಾನು, ಅಂದರೆ ತನ್ನ ಪ್ರೀತಿಯ ದೇಹವನ್ನು ಕೂಡ ಮರೆಯುವನು. ಆ ಮೂಲಕ ಭಕ್ತನು ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡು ಪರಮಗುರಿಯನ್ನು ಮುಟ್ಟುವನು.

**ವೈಧಿಭಕ್ತಿ, ರಾಗಭಕ್ತಿ :** ಶಾಸ್ತ್ರಗಳಲ್ಲಿ ಹೇಳಿರುವ ವಿಧಿನಿಯಮಗಳನ್ನು ಅನುಷ್ಠಾನ ಮಾಡುವುದು **ವೈಧಿಭಕ್ತಿ**. ಭಗವಂತನ ಮೇಲೆ ಇಡುವ ಅತಿ ನಿಕಟ ಪ್ರೇಮದಿಂದ ಉಂಟಾಗುವ ಸ್ಥಿತಿ **ರಾಗಭಕ್ತಿ**. ರಾಗಭಕ್ತಿ ಬಂದ ಮೇಲೆ ವೈದಿಕ ಕರ್ಮಗಳನ್ನು ಮಾಡುವ ಆವಶ್ಯಕತೆ ಇರುವುದಿಲ್ಲ.

ಭಗನ್ನಾಮಜಪ, ಉಪಾಸನೆ, ತೀರ್ಥಯಾತ್ರೆ ಮುಂತಾದುವುಗಳು ವೈಧಿಭಕ್ತಿಗೆ ಸಂಬಂಧಿಸಿದವುಗಳು. ಇವುಗಳನ್ನು ದೀರ್ಘ ಕಾಲ ಮತ್ತು ನಿರಂತರವಾಗಿ ಅಭ್ಯಾಸ ಮಾಡಿದಾಗ ಉತ್ತಮ ಭಕ್ತಿಯಾಗಿರುವ ರಾಗಭಕ್ತಿ ಬರುವುದು. ಆಗ ಪ್ರಾಪಂಚಿಕ ವಿಷಯಗಳ ಚಿಂತನೆ ಸಂಪೂರ್ಣ ನಾಶವಾಗಿ ಪವಿತ್ರ ಪ್ರೇಮ ಮಾತ್ರ ಉಳಿಯುವುದು; ಜೀವಾತ್ಮನು ಪರಮಾತ್ಮನಲ್ಲಿ ಐಕ್ಯನಾಗುವನು. ಇದು ಸಾಮಾನ್ಯ ಭಕ್ತನೊಬ್ಬ ಪಡೆಯಬಹುದಾದ ಉನ್ನತ ಸ್ಥಿತಿ.

ಅವತಾರಗಳು ಮತ್ತು ಸಂತ ಮಹಾತ್ಮರ ವಿಷಯ ಬೇರೆ. ಭಕ್ತಿಯು ಅವರ ಹೃದಯದ ಅಂತರಾಳದಿಂದ ಮೂಡುವುದು. ಚೈತನ್ಯರೇ ಮೊದಲಾದವರು ಅವತಾರಪುರುಷರು. ಇವರು ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡ ಮೇಲೂ, ಲೋಕಶಿಕ್ಷಣಕ್ಕಾಗಿ ತಮ್ಮ ವ್ಯಕ್ತಿತ್ವವನ್ನು ಇಟ್ಟುಕೊಂಡಿರುತ್ತಾರೆ. ಸಮಾಧಿಯ ಮಾಳಿಗೆಗೆ ಹೋದ ಮೇಲೆ, ಮಾನವನ ಇಂದ್ರಿಯಗಳಿಗೆ ಕಾಣುವ ಈ ಜಗತ್ತು ಅವ್ಯಕ್ತದ ವ್ಯಕ್ತ ಸ್ವರೂಪವೆಂದು ತೋರುವುದು. ಇಂಥ ಅನುಭವ ಅವತಾರಪುರುಷರಿಗೆ ಉಂಟಾಗುತ್ತದೆ.

**ಪ್ರೇಮ ಮತ್ತು ಪರಾಭಕ್ತಿ:** ಭಗವಂತನ ಸಾಕ್ಷಾತ್ಕಾರವಾದ ಮೇಲೆ ಪರಾಭಕ್ತಿ ಬರುವುದು. ಪ್ರೇಮವೆನ್ನುವುದು ಭಕ್ತನು ಭಗವಂತನಿಗೆ ಕಟ್ಟಿಕೊಂಡಿರುವ ಹಗ್ಗದಂತೆ. ಭಕ್ತನಾದವನು ದೇವರನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವನು. ಅವನು ಕರೆದಾಗ ದೇವರು ಬರುವನು. ಭಾವವೆನ್ನುವ ಭಕ್ತಿ ಇನ್ನೂ ಮಾಗದ ಹಣ್ಣಿನಂತೆ, ಪ್ರೇಮವೆನ್ನುವುದು ಮಾಗಿದ ಹಣ್ಣಿನಂತೆ. ಅಂಜಿಕೆಯಿಂದ ಭಗವಂತ ನನ್ನು ಪೂಜಿಸುವುದು ಅತ್ಯಂತ ಕೀಳು ತರಹದ ಭಕ್ತಿ ಎನ್ನಬಹುದು. ಇದಕ್ಕಿಂತ ಉತ್ತಮವಾದುದು ಭಗವಂತನನ್ನು ನಮ್ಮ ತಂದೆ ಅಥವಾ ತಾಯಿ ಎಂದು ಭಾವಿಸುವುದು. ಪರಾಭಕ್ತಿಯಲ್ಲಾದರೋ ಭಕ್ತನು ದೇವರ ಸಾಮೀಪ್ಯವನ್ನು ಅನುಭವಿಸುವನು. ಇದು ಶ್ರೀಕೃಷ್ಣ ಪರಮಾತ್ಮನ ಮೇಲೆ ಗೋಪಿಯರಿಗಿದ್ದ ಪ್ರೇಮದಂತೆ. ಹಾಗೆಂದೇ ಅವನನ್ನು 'ಗೋಪೀಜನವಲ್ಲಭ' ನೆಂದು ಭಕ್ತರು ಆರಾಧಿಸುತ್ತಾರೆ. ನಿಜವಾದ ಭಕ್ತನು ಕ್ಷಣಿಕ ಪ್ರಾಪಂಚಿಕ ವಿಷಯಭೋಗಗಳನ್ನು ಬೇಡುವುದಿಲ್ಲ. ಪರಿಶುದ್ಧವಾದ ಭಕ್ತಿಗಾಗಿ ಮಾತ್ರ ಪ್ರಾರ್ಥಿಸುವನು.

**ಪ್ರೇಮದ ಎರಡು ಗುಣಗಳು:** ಭಗವತ್ಪ್ರೇಮದ ಎರಡು ಪ್ರಮುಖ ಗುಣಗಳೆಂದರೆ, 'ಬಾಹ್ಯ ಪ್ರಪಂಚವನ್ನು ಮರೆಯುವುದು' ಮತ್ತು 'ತನ್ನ ಸ್ವಂತ ದೇಹವನ್ನೂ ಮರೆಯುವುದು.' ಒಮ್ಮೆ ಉದ್ಧವನು ಯಶೋದೆಗೆ ಹೇಳುತ್ತಾನೆ, "ತಾಯಿ, ನಿನ್ನ ಕೃಷ್ಣ ಸ್ವಯಂ ಭಗವಂತ, ಸಾಮಾನ್ಯ ಮನುಷ್ಯನಲ್ಲ. ಈ ಜಗತ್ತಿಗೆ ಚಿಂತಾಮಣಿಯಂತೆ ಇರುವವನು." ಅದಕ್ಕೆ ಯಶೋದೆ, "ಹಾಗಲ್ಲ, ನಾನು ನಿನ್ನ ಚಿಂತಾಮಣಿಯ ವಿಷಯವಾಗಿ ಕೇಳಿಲ್ಲ. ನನ್ನ ಗೋಪಾಲ ಹೇಗೆ ಇರುವನು ಎಂಬುದನ್ನು ಕೇಳುತ್ತಿರುವೆನು. ನಿನ್ನ ಚಿಂತಾ ಮಣಿಯನ್ನಲ್ಲ, ನನ್ನ ಗೋಪಾಲನನ್ನು!" ಎಂದು ಹೇಳಿದಳು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಯಶೋದೆಯ ವ್ಯಕ್ತಿತ್ವ ಶ್ರೀಕೃಷ್ಣನಲ್ಲಿ ಸಂಪೂರ್ಣವಾಗಿ ಲೀನವಾಗಿ ಹೋಗಿತ್ತು ಎನ್ನುವುದು.

ಚೈತನ್ಯದೇವನಂತಹ ಅವತಾರಪುರುಷರು ಮತ್ತು ಬಾಲ್ಯದಿಂದಲೇ ಇಂತಹ ಪ್ರೇಮವನ್ನು ಸ್ವಭಾವತಃ ಪಡೆದ ಪ್ರಹ್ಲಾದನಂತಹ ಭಕ್ತರು – ಇವರು ಬಾಲ್ಯಾವಸ್ಥೆಯಲ್ಲಿಯೇ ದೇವರಿಗಾಗಿ ಅಳುವರು. ಇಂತಹವರು ನಿತ್ಯಸಿದ್ಧರ ಗುಂಪಿಗೆ ಸೇರಿದವರು.

**ಗೋಪೀಪ್ರೇಮ:** ಒಮ್ಮೆ ಶ್ರೀರಾಮಕೃಷ್ಣರು ಗೋಪಿಯರ ಪ್ರೇಮದ ವಿಚಾರವಾಗಿ ಮಾತನಾಡುತ್ತಾ, ತಮ್ಮ ಶಿಷ್ಯರಿಗೆ ಹೀಗೆಂದರು: "ಗೋಪಿಯರ ಪ್ರೇಮದ ತೀವ್ರತೆ ಎಷ್ಟು ಅದ್ಭುತವಾಗಿತ್ತು! ತಮಾಲವೃಕ್ಷವನ್ನು ನೋಡಿದ ಕ್ಷಣವೇ ಅವರು ಪ್ರೇಮೋನ್ಮತ್ತರಾದರು. ಆ ಮರದ ಶ್ಯಾಮಲ ಬಣ್ಣ ಅವರಿಗೆ ಕೃಷ್ಣನ ನೆನಪು ತಂದಿತು." ಇಂತಹ ಪ್ರೇಮಾನುರಾಗದ ಬಿಂದುವೊಂದು ಲಭಿಸಿದರೆ ಸಾಕು, ಮನುಷ್ಯ ಪಾವನವಾಗುತ್ತಾನೆ. ಗೋಪಿಯರ ನಿಷ್ಠೆ ಅದ್ಭುತವಾದುದು. ಗೋಪಿಯರದು ಪ್ರೇಮಭಕ್ತಿ. ಇದಕ್ಕೆ 'ಅವ್ಯಭಿಚಾರಿಣೀ ಭಕ್ತಿ' ಅಥವಾ 'ನಿಷ್ಠಾಭಕ್ತಿ' ಎಂತಲೂ ಹೆಸರು. ಇಂತಹ ಭಕ್ತಿಯನ್ನು ಪಡೆದ ಗೋಪಿಯರಿಗೆ ಕೃಷ್ಣನೇ ಎಲ್ಲವೂ ಆಗಿ ಕಂಡುಬರುತ್ತಿದ್ದನು. ಹನುಮಂತ ದ್ವಾರಕೆಗೆ ಹೋದಾಗ ಸೀತಾರಾಮನನ್ನು ಮಾತ್ರ ನೋಡುವೆನೆಂದು ಹೇಳಿದನು. ಆಗ ಕೃಷ್ಣ